# ಬಾಳೆಯಲ್ಲಿ ಗುಣಮಟ್ಟದ ಇಳುವರಿಗೆ ಬಾಳೆಗೊನೆ ಹೊದಿಕೆಯ ಬಳಕೆ



**ಭಾ**ರತ ವಿಶ್ವದಲ್ಲಿಯೇ ಅತೀ ಹೆಚ್ಚು ಬಾಳೆ ಬೆಳೆಯುವ ದೇಶವಾಗಿ ಹೊರಹೊಮ್ಮಿದೆ. ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಬಾಳೆ ಹಣ್ಣಿನಲ್ಲಿ ಬಹಳಷ್ಟು ಪ್ರಮಾಣವು ಸ್ಥಳೀಯ ದಿನನಿತ್ಯದ ಊಟೋಪಚಾರದಲ್ಲಿ ಬಳಕೆಯಾಗುತ್ತದೆ. ಹಣ್ಣಿನ ಗಾತ್ರದಲ್ಲಿ ಏಕರೂಪತೆ ಇಲ್ಲದಿರುವುದು ಮತ್ತು ಹಣ್ಣುಗಳ ಮೇಲೆ ಕಪ್ಪು ಚುಕ್ಕೆಯಂತಹ ಮಚ್ಚೆಗಳಿರುವುದರಿಂದ ರಫ್ತು ಮಾಡುತ್ತಿರುವ ಬಾಳೆ ಹಣ್ಣಿನ ಪ್ರಮಾಣವು ತುಂಬಾ ಕಡಿಮೆ. ಸ್ಥಳೀಯ ರೈತರು ಬಾಳೆ ರಫ್ತಿಗೆ ತೊಡಕಾಗಿರುವ ಈ ಅಂಶಗಳನ್ನು ನಿಯಂತ್ರಿಸಲು ಬಹಳಷ್ಟು ಕ್ರಮಗಳನ್ನು ಸಹ ಅನುಸರಿಸುತ್ತಿದ್ದಾರೆ.

ಬಹಳ ಹಿಂದಿನಿಂದಲೂ ಹಳೆಯ ಬಾಳೆ ಎಲೆಗಳನ್ನು ಹೊದಿಕೆಯಾಗಿ ಗೊನೆಗೆ ಹೊದಿಸಲಾಗುತ್ತಿತ್ತು. ನಂತರದ ದಿನಗಳಲ್ಲಿ ಕಾಗದದ ಚೀಲಗಳು ಬಳಕೆಗೆ ಬಂದವು. 1950ರ ನಂತರದ ವರ್ಷಗಳಲ್ಲಿ ಪ್ಲಾಸ್ಟಿಕ್ ಚೀಲಗಳನ್ನು ಹೊದಿಕೆಯಾಗಿ ಬಳಸಲ್ಪಟ್ಟು, ಪಾಲಿವಿನೈಲ್ ಕ್ಲೋರೈಡ್‌ನಿಂದ ಮಾಡಿದ ಹೊದಿಕೆ ಚೀಲಗಳು ಉತ್ತಮವೆಂದು ಕಂಡುಬಂದು ತದನಂತರ ನೀಲಿ, ಹಸಿರು, ಹಳದಿ ಮತ್ತು ಪಾರದರ್ಶಕತೆಯೊಂದಿಗೆ ಸಿಲ್ವರ್ ಬಣ್ಣವನ್ನು ಹೊಂದಿರುವ ಚೀಲಗಳು ಬಳಕೆಗೊಂಡವು. ವಿವಿಧ ಬಣ್ಣಗಳ ಚೀಲಗಳಲ್ಲಿ ಪಾರದರ್ಶಕತೆಯೊಂದಿಗೆ ಸಿಲ್ವರ್ ಬಣ್ಣ ಹೊಂದಿರುವ ಚೀಲಗಳನ್ನು ಸೂರ್ಯನ ಕಿರಣಗಳಿಂದಾಗುವ ಹಾನಿಯನ್ನು ತಪ್ಪಿಸಲು ಬಳಸಿದರೆ ಬೇರೆ ಬಣ್ಣದ ಚೀಲಗಳನ್ನು ಬೇಗ ಇಳುವರಿ ಪಡೆಯಲು ಮತ್ತು ಗುಣಮಟ್ಟವನ್ನು ಕಾಪಾಡಿಕೊಳ್ಳಲು ಬಳಸಲಾಯಿತು. ವಾತಾವರಣ ಮತ್ತು ಹೊದಿಕೆಯ ದಪ್ಪಕ್ಕೆ ಅನುಗುಣವಾಗಿ ಸರಾಸರಿ $0.5^0$ ರಿಂದ $7^0$ ಸೆಂಟಿಗ್ರೇಡ್‌ನಷ್ಟು ಉಷ್ಣಾಂಶ ಚೀಲದ ಒಳಗಡೆ 24 ಗಂಟೆಗಳಲ್ಲಿ ಹೆಚ್ಚುತ್ತದೆ.

ಹೊದಿಕೆ ಬಣ್ಣವು, ದ್ಯುತಿಸಂಶ್ಲೇಷಣೆ ಕ್ರಿಯೆಗೆ ಕಾರಣವಾಗಿರುವ ಸಕ್ರಿಯ ಕಿರಣಗಳಿಗೆ ಶೋಧಕವಾಗಿ ವರ್ತಿಸುತ್ತದೆ. ಸಾಮಾನ್ಯವಾಗಿ ನೀಲಿ ಅಥವಾ ಪಾರದರ್ಶಕ ಹೊದಿಕೆ ಚೀಲಗಳನ್ನು ಬಳಸಲಾಗುತ್ತದೆ. ಏಕೆಂದರೆ ನೀಲಿ ಬಣ್ಣದ ಚೀಲಗಳು ಶೇಕಡ 73ರಷ್ಟು ಹಾಗೂ ಪಾರದರ್ಶಕ ಚೀಲಗಳು ಶೇಕಡ 93ರಷ್ಟು ದ್ಯುತಿಸಂಶ್ಲೇಷಣೆ ಸಕ್ರಿಯ ಕಿರಣಗಳನ್ನು ಹಾದುಹೋಗಲು ಅವಕಾಶ ಮಾಡಿಕೊಡುತ್ತವೆ. ಶೇಕಡ 73ರಷ್ಟು ಕಿರಣಗಳನ್ನು ತನ್ಮೂಲಕ ಹಾದುಹೋಗಲು ಅವಕಾಶ ಮಾಡಿಕೊಟ್ಟರು, ನೇರಳಾತೀತ ಕಿರಣಗಳನ್ನು ತಡೆಹಿಡಿಯುವುದರಿಂದ ಗೊನೆಗೆ ಪೂರಕ ವಾತಾವರಣವನ್ನು ಕಲ್ಪಿಸಿ, ಕಾಯಿಗಳು ಸುಟ್ಟಂತಾಗುವುದು ತಪ್ಪುತ್ತದೆ. ಹಾಗೆಯೇ ಈ ಬಣ್ಣಗಳುಳ್ಳ ಹೊದಿಕೆಗಳು ಬಾಳೆ ಕಾಯಿಯ ಇಳುವರಿ ಹೆಚ್ಚಿಸಿ, ಕಾಯಿಯ ಸಿಪ್ಪೆ ಗಟ್ಟಿಯಾಗುವುದನ್ನು ತಡೆಯುತ್ತವೆ.

ನೈಸರ್ಗಿಕವಾಗಿ ಭೂಮಿಯಲ್ಲಿ ಕೊಳೆಯಬಲ್ಲ ಪ್ಲಾಸ್ಟಿಕ್ ಹೊದಿಕೆಗಳನ್ನು ಸಹ ವಿವಿಧ ದೇಶಗಳಲ್ಲಿ ಬಳಸಲಾಗುತ್ತಿದೆ. ಈ ಹೊದಿಕೆಗಳಲ್ಲಿ ರಂಧ್ರಗಳಿರುವುದರಿಂದ ಗಾಳಿ ಸಂಚಾರವಾಗಿ ಶಿಲೀಂಧ್ರದ ಬೆಳವಣಿಗೆ ಮತ್ತು ತೇವಾಂಶವನ್ನು ನಿಯಂತ್ರಿಸುತ್ತದೆ. ರಂಧ್ರಗಳ ಗಾತ್ರ ಪ್ರತಿ 7.6 ಸೆಂ.ಮೀ.ಗೆ 12.7 ಮಿ.ಮೀ., ಪ್ರತಿ 10 ಸೆಂ.ಮೀ.ಗೆ 8 ಮತ್ತು 6 ಮಿ.ಮೀ, 3.ಮಿ.ಮೀ. ಅಥವಾ ತುಂಬಾ ಚಿಕ್ಕ ರಂಧ್ರಗಳಿರುತ್ತವೆ. ಹೊದಿಕೆಯ ದಪ್ಪವು 12–25 ಮೈಕ್ರೋಮೀಟರ್‌ನಷ್ಟಿರುತ್ತದೆ, >130 ಮೈಕ್ರೋಮೀಟರ್‌ಗಿಂತ ಹೆಚ್ಚು ದಪ್ಪವಿರುವ ಹೊದಿಕೆಯು ಚಳಿಯಿಂದ ಬಾಳೆಕಾಯಿಗಳನ್ನು ರಕ್ಷಿಸಿದರೆ ಹೆಚ್ಚು ಸೂರ್ಯನ ಕಿರಣಗಳ ಪ್ರಖರತೆ ಇರುವ ಜಾಗದಲ್ಲಿ ಇಷ್ಟು ದಪ್ಪವಿರುವ ಹೊದಿಕೆಯು ಕಾಯಿಗಳು ಸುಟ್ಟಂತಾಗಲು ಕಾರಣವಾಗುತ್ತವೆ. ತುಂಬಾ ತೆಳ್ಳಗಿನ (20–45 ಮೈಕ್ರಾನ್), 0.81 – 0.91 ಮೀ. ಅಗಲ ಮತ್ತು 1–1.5 ಮೀ. ಉದ್ದವಿರುವ ಪ್ಲಾಸ್ಟಿಕ್ ಗೊನೆ ಹೊದಿಕೆಗಳು ಸಹ ಮಾರುಕಟ್ಟೆಯಲ್ಲಿ ಲಭ್ಯ ಇವೆ.

ಪಾಲಿಥಿನ್ ಚೀಲಕ್ಕೆ ಪರ್ಯಾಯವಾಗಿ ಪಾಲಿ–ಪ್ರೊಪಿಲಿನ್‌ನಿಂದ ಮಾಡಿದ ತೆಳ್ಳಗಿನ ಚೀಲಗಳು ಸಹ ಮಾರುಕಟ್ಟೆಯಲ್ಲಿ ರೈತರಿಗೆ ಲಭ್ಯ ಇವೆ. ಬಾಳೆ ಗೊನೆಗಳಿಗೆ ಹೊದಿಸಲು ಮಾಡಿರುವಂತಹ ಈ ಚೀಲಗಳು 1.6 ಮೀ.ನಿಂದ 3.2 ಮೀ. ಅಗಲ ಹೊಂದಿದ್ದು, ವಿವಿಧ ದಪ್ಪಗಳಲ್ಲಿ ಲಭ್ಯವಾಗುತ್ತಿವೆ. ಸರಿಯಾಗಿ ಬಳಕೆ ಮಾಡಿದ ಈ ಚೀಲಗಳನ್ನು ಎರಡು ಬೆಳೆಗೆ ಬಳಕೆ ಮಾಡಬಹುದು. ಬಾಳೆಗೊನೆಯ ಹೊದಿಕೆಯ ಆಯ್ಕೆ ವಾತಾವರಣದ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ. ಚಳಿ ಮತ್ತು ಅರೆಉಷ್ಣ ವಲಯ ಹೊಂದಿರುವ ಪ್ರದೇಶಗಳಿಗೆ ದಪ್ಪನೆಯ ಮತ್ತು ರಂಧ್ರವಿರುವ ಪ್ಲಾಸ್ಟಿಕ್ ಹೊದಿಕೆಗಳು ಸೂಕ್ತ. ಕರ್ನಾಟಕದಂತಹ ವಾತಾವರಣ ಹೊಂದಿರುವ ರಾಜ್ಯಗಳಿಗೆ, ತೆಳ್ಳಗಿನ, ರಂಧ್ರವಿರುವ ಪಾಲಿ–ಪ್ರೊಪಿಲಿನ್ ಚೀಲಗಳು ಸೂಕ್ತ. ಬಾಳೆ ಗೊನೆ ಹೊದಿಕೆಯನ್ನು ಗೊನೆಗೆ ಹೊದಿಸಿದ ಮೇಲೆ ಗೊನೆಗೆ ಬೇಕಾದ ಗಾಳಿ ಸಂಚಾರವು ಹೊದಿಕೆಯಲ್ಲಿರುವ ರಂಧ್ರದ ಅಗಲ ಮತ್ತು ವಾತಾವರಣವನ್ನು ಅವಲಂಬಿಸಿರುತ್ತದೆ. ಉಷ್ಣವಲಯ ವಾತಾವರಣದ ಪ್ರದೇಶಗಳಿಗೆ ಸೂಕ್ಷ್ಮ ರಂಧ್ರ (0.47 ಸೆಂ.ಮೀ. ಅಗಲ) ಮತ್ತು 0.5 ಇಂಚು ಅಗಲ ರಂಧ್ರ ಹೊಂದಿರುವ ಹೊದಿಕೆಗಳನ್ನು ಬಳಸಬಹುದು.

ಕೆಲವೊಮ್ಮೆ, ಕೀಟಗಳನ್ನು ಬೆಳೆಯಿಂದ ದೂರವಿಡಲು ಕೀಟನಾಶಕಪೂರಿತ ಹೊದಿಕೆಗಳನ್ನು ಸಹ ಬಳಸಲಾಗುತ್ತದೆ. ಕ್ಲೊರೊಪೈರಿಪಾಸ್ (1%) / ಬೈಪೆನೆತ್ರೀನ್ (0.2%) ನಂತಹ ಕೀಟನಾಶಕಗಳಿಂದ ಪೂರಿತವಾದ ಹೊದಿಕೆಗಳನ್ನು ಸಸ್ಯ ಹೇನು, ತ್ರಿಪ್ಸ್ ಮತ್ತು ಜೀರುಂಡೆಗಳ ನಿಯಂತ್ರಣಕ್ಕಾಗಿ ಉಪಯೋಗಿಸಲಾಗುತ್ತಿದೆ. ಸಾವಯವ ಮಾದರಿಯ ಬಾಳೆ ಬೆಳೆಗೆ ಬೆಳ್ಳುಳ್ಳಿ, ಮೆಣಸು ಮತ್ತು ಏಲಕ್ಕಿಗಳಂತಹ ಅಂಶಗಳಿಂದ ಪೂರಿತವಾದ ಹೊದಿಕೆಗಳನ್ನು ಬಳಸಲಾಗುತ್ತಿದೆ.

**ಬಾಳೆಗೊನೆ ಹೊದಿಕೆಯ ಬಳಕೆಯಿಂದಾಗುವ ಅನುಕೂಲಗಳು**

1. ಗೊನೆಗೆ ಹೊದಿಕೆಯಿಂದ ಹೆಚ್ಚಾಗುವ ಉಷ್ಣತೆಯಿಂದ ಗೊನೆಯು ಬೇಗನೆ ಕೊಯ್ಲಿಗೆ ಬರುತ್ತದೆ. (15 ದಿವಸದಿಂದ 1 ತಿಂಗಳು ಮುಂಗಡವಾಗಿ)
2. ಹೊದಿಕೆಯು ಬಾಳೆ ಕಾಯಿಯ ಹೊರಮೈಯನ್ನು ಸೂರ್ಯನ ಹಾನಿಕಾರಕ ಕಿರಣ, ಕೀಟ ಮತ್ತು ಹಕ್ಕಿಗಳ ಬಾಧೆಯಿಂದ ರಕ್ಷಿಸುತ್ತದೆ.
3. ಬಾಳೆಗೊನೆಯಲ್ಲಿರುವ ಎಲ್ಲಾ ಕಾಯಿಗಳು ಸಮ ಗಾತ್ರದಲ್ಲಿ ಬೆಳವಣಿಗೆ ಹೊಂದುವುದರ ಜೊತೆಗೆ ಹೆಚ್ಚು ದಪ್ಪವನ್ನು ಹೊಂದುತ್ತದೆ.
4. ಚಿಬ್ಬುರೋಗದ ಹಾನಿಯನ್ನು ಕಡಿಮೆಗೊಳಿಸುತ್ತದೆ.
5. ಇಳುವರಿಯು ಶೇ. 5–25 ರಷ್ಟು ಹೆಚ್ಚುತ್ತದೆ.
6. ಉತ್ತಮ ಮಾರುಕಟ್ಟೆ ಬೆಲೆಯೊಂದಿಗೆ ಅಧಿಕ ಲಾಭ
7. ಹಣ್ಣಾದಾಗ ಎಲ್ಲಾ ಹಣ್ಣುಗಳು ಸಮಾನಾಂತರವಾಗಿ ಬಣ್ಣವನ್ನು ಹೊಂದಿರುತ್ತವೆ ಮತ್ತು ಅವುಗಳನ್ನು ಹೆಚ್ಚಿನ ದಿವಸ ಶೇಖರಿಸಿಡಬಹುದು.
8. ಕೊಯ್ಲಿನ ಮತ್ತು ಸಾಗಾಣಿಕೆ ಸಮಯದಲ್ಲಿ ಕಾಯಿಯ ಹೊರಮೈಗೆ ಆಗಬಹುದಾದ ಹಾನಿಯಿಂದ ರಕ್ಷಣೆ.

**ಬಾಳೆಗೊನೆ ಹೊದಿಕೆಯನ್ನು ಗೊನೆಗೆ ಹಾಕಲು ಸೂಕ್ತ ಸಮಯ**

ಹೂಬಿಟ್ಟ 2–3 ವಾರಗಳ ನಂತರ ಅಂದರೆ ಗೊನೆಯ ಕೊಯ್ಲಿನ 3 ತಿಂಗಳ ಮುಂಚೆ, ಗೊನೆಯಲ್ಲಿರುವ ಕಾಯಿಗಳು ಮೇಲ್ಮುಖವಾಗಿ ಬಾಗಿ ಕಾಯಿಯ ಮೇಲಿರುವ ಹೂವಿನ ಭಾಗಗಳು ಒಣಗಿ, ಒರಟಾದ ನಂತರ ಹೊದಿಕೆಯನ್ನು ಗೊನೆಗೆ ಹಾಕಬೇಕು. ತ್ರಿಪ್ಸ್‌ಹುಳು ಬಾಧೆ ಕಂಡುಬರುವ ಪ್ರದೇಶಗಳಲ್ಲಿ, ಗೊನೆಯಲ್ಲಿ ಕಾಯಿಕಚ್ಚುವುದಕ್ಕೆ ಮುಂಚೆ, ಹೊದಿಕೆಯನ್ನು ಗೊನೆಗೆ ಕಟ್ಟುವುದು ಸೂಕ್ತ. ಇದಕ್ಕಾಗಿ ಹೆಚ್ಚು ದಪ್ಪವಿರುವ



ಹೆಚ್ಚು ಮಳೆ ಆಗಬಾರ್ದು, ಹುಚ್ಚು ಮಗ ಉಚ್ಚಬಾರ್ದು!

ಹೊದಿಕೆಗಳನ್ನು ಬಳಸಿಕೊಳ್ಳುವುದರಿಂದ ತ್ರಿಪ್ಸ್ ನಿಯಂತ್ರಣದ ಜೊತೆಗೆ ಹೆಚ್ಚು ಕಾಲ ಉಷ್ಣತೆಯನ್ನು ಸಮಾನ ಸ್ಥಿತಿಯಲ್ಲಿಡಬಹುದು.

**ಹೊದಿಕೆಯನ್ನು ಗೊನೆಗೆ ಹಾಕುವಿಕೆ**

1. ಗೊನೆಗೆ ಹಾಕಬೇಕಾಗಿರುವ ಹೊದಿಕೆಯನ್ನು ಗೊನೆಯ ಕೆಳಭಾಗದಿಂದ ಸೇರಿಸುವುದರ ಮೂಲಕ ಪೂರ್ತಿ ಗೊನೆಗೆ ಹಾಕಬೇಕು. ನಂತರ ಹೊದಿಕೆಯನ್ನು ಗೊನೆಯ ಮೊದಲನೇ ಕೈ (ಚಿಪ್ಪು) ಮೇಲಿರುವ ದಿಂಡಿಗೆ ಕಟ್ಟಬೇಕು.
2. ಬಾಳೆಗೊನೆ ಹೊದಿಕೆಯನ್ನು ಗೊನೆಯ ಕೆಳಗಿನ, ಕೊನೆಯ ಕೈಚಿಪ್ಪಿನಿಂದ ಅರ್ಧ ಅಡಿಯಷ್ಟು ಹೆಚ್ಚಿಗೆ ಬರುವಂತೆ ಗೊನೆಗೆ ಮಡಚಿ ಕಟ್ಟಬೇಕು. ಹೀಗೆ ಕಟ್ಟಿದ ಹೊದಿಕೆಯನ್ನು ಗೊನೆಯಲ್ಲಿಯೇ 2 ತಿಂಗಳ ಕಾಲದವರೆಗೆ ಅಂದರೆ ಬಾಳೆ ಗೊನೆ ಕೊಯ್ಲು ಮಾಡುವವರೆಗೆ ಬಿಡಬೇಕು.

**ಪ್ಲಾಸ್ಟಿಕ್ ಹೊದಿಕೆಗಳ ಪುನರ್ ಬಳಕೆ**

ಬಹಳಷ್ಟು ಬಾಳೆ ತೋಟದ ಮಾಲೀಕರು ಈ ರೀತಿಯ ಪ್ಲಾಸ್ಟಿಕ್ ಹೊದಿಕೆಗಳನ್ನು ಪುನರ್ ಬಳಕೆ ಮಾಡುತ್ತಿದ್ದಾರೆ. ಚೆನ್ನಾಗಿ ಬಲಿತು ಗೊನೆ ಕೊಯ್ಲು ಮಾಡಿದ ನಂತರ ನಿಧಾನವಾಗಿ ಪ್ಲಾಸ್ಟಿಕ್ ಹೊದಿಕೆಯನ್ನು ಗೊನೆಯಿಂದ ತೆಗೆಯಲಾಗುತ್ತದೆ. ಇಂತಹ ಬಳಕೆ ಮಾಡಿದ ಹೊದಿಕೆಯನ್ನು ನೀರಿನಲ್ಲಿ ಮೊದಲು ತೊಳೆದು ನಂತರ ಸೋಪಿನಿಂದ ತೊಳೆಯಲಾಗುತ್ತದೆ. ತೊಳೆದ ಹೊದಿಕೆಗಳನ್ನು ಹಿಂಡಿ ಒಣಗಿಸಲು ಗಾಳಿಯಲ್ಲಿ ತೂಗಿ ಹಾಕಿಡಲಾಗುತ್ತದೆ. ಕೊನೆಗೆ ಒಣಗಿದ ಹೊದಿಕೆಗಳನ್ನು 4 ವಾರಗಳವರೆಗೆ ದೊಡ್ಡ ಚೀಲದಲ್ಲಿ ಶೇಖರಿಸಿಟ್ಟು 3–4 ಬಾರಿ ಪುನರ್‌ಬಳಕೆ ಮಾಡಬಹುದು.

**ಬಾಳೆಗೊನೆ ಹೊದಿಕೆಯ ಬಳಕೆಯ ಮುಂಚೆ ಗಮನಿಸಬೇಕಾದ ಅಂಶಗಳು**

1. ಗಾಳಿ ಸಂಚಾರಕ್ಕೆ ಅನುಕೂಲಕರವಾಗಿ ರಂಧ್ರ ಹೊಂದಿರದ ಹೊದಿಕೆಗಳನ್ನು ಬಿಸಿ ಮತ್ತು ತೇವಾಂಶ ಹೆಚ್ಚಿರುವ ವಾತಾವರಣದಲ್ಲಿ ಬಳಸುವುದರಿಂದ ಗೊನೆ ಕೊಳೆಯುವ ಮತ್ತು ಕಾಯಿ ಬಲಿಯದೇ ಬೇಗನೆ ಹಣ್ಣಾಗುವ ಸಂಭವವಿರುತ್ತದೆ.
2. ಕೆಲವು ಬಾರಿ ಕೀಟನಾಶಕಗಳಿಂದ ಪೂರಕವಾಗಿರದ ಹೊದಿಕೆಯ ಬಳಕೆಯಿಂದ ಕೀಟಗಳು ಗೊನೆಯಲ್ಲಿ ವೃದ್ಧಿಯಾಗುತ್ತವೆ.
3. ಹೊದಿಕೆಯ ಖರೀದಿ ಮತ್ತು ಅಳವಡಿಕೆ ತಗಲುವ ವೆಚ್ಚವನ್ನು ಗಮನದಲ್ಲಿಟ್ಟು ಕೊಳ್ಳಬೇಕು, ಏಕೆಂದರೆ ಚೀಲದ ಗಾತ್ರಕ್ಕೆ ಅನುಗುಣವಾಗಿ ಬೆಲೆ ಏರುಪೇರು ಆಗುತ್ತದೆ.
4. ಸಾಮಾನ್ಯವಾಗಿ ಜಿ–9 ಬಾಳೆಗೆ ಬಳಸುವ ಚೀಲದ ಬೆಲೆಯು (ಪ್ಲಾಸ್ಟಿಕ್/ಪಾಲಿಪ್ರೋಪಿಲಿನ್) 10–12 ರೂ. ಪ್ರತಿ ಚೀಲಕ್ಕೆ.
5. ಈ ತಂತ್ರಜ್ಞಾನದ ಅಳವಡಿಕೆಯಿಂದ 0.75 –1.00 ರೂ. ಪ್ರತಿ ಕೆ.ಜಿ. ಕಾಯಿಗೆ ಹೆಚ್ಚು ಆದಾಯವನ್ನು ಪಡೆಯಬಹುದು.



✍ ಸಂತೋಷ, ಎಚ್.ಎಮ್., 9964572247, ವಿಜ್ಞಾನಿಗಳು(ತೋಟಗಾರಿಕೆ)
ಮತ್ತು ರೂಪಾ, ಎಸ್. ಪಾಟೀಲ್, ಕೃಷಿ ವಿಜ್ಞಾನ ಕೇಂದ್ರ, ಶಿರಸಿ, ಉತ್ತರ ಕನ್ನಡ(ಜಿ)

# ಪದಬಂಧ

**ಎಡದಿಂದ ಬಲಕ್ಕೆ:**

1. ಮಾವು ಚಿಗುರುವ ಕಾಲ/ಮಾಸ (5)
4. ಹೊಸ ವರ್ಷದ ಮೊದಲ ಮಳೆ (5)
6. ಹಣ್ಣುಗಳ ರಾಜ (2)
7. ಹೊಸತು (3)
8. 2016–17 ನೇ ಸಂವತ್ಸರ (4)

**ಮೇಲಿನಿಂದ ಕೆಳಗೆ:**

2. ಸಂಸ್ಕೃತದ ವರ್ಷ (5)
3. ಆದಿಯಲ್ಲಿ ಬರುವ ಹಬ್ಬ (3)
5. ಹಬ್ಬದಲ್ಲಿ ಇದನ್ನು ಬೆಲ್ಲದ ಜೊತೆಯಲ್ಲಿ ಹಂಚುತ್ತಾರೆ (2)
6. ಹಬ್ಬದಲ್ಲಿ ಬಾಗಿಲಿಗೆ ಕಟ್ಟುತ್ತಾರೆ (6)
9. 2017–18 ನೇ ಸಂವತ್ಸರ (3)




**ಕಳೆದ ಸಂಚಿಕೆ ಸರಿ ಉತ್ತರ**




✍ ನಯನ, ಬಿ.ಪಿ., ಹಿರಿಯ ಸಂಶೋಧನಾ ಸಹಾಯಕರು,
ಅಡಿಕೆ ಸಂಶೋಧನಾ ಕೇಂದ್ರ, ನವಿಲೆ, ಶಿವಮೊಗ್ಗ